Reg No. B G 155 13-3-1969

52 nd Year of Publication

SATYAVADI Daily, MYSORE 4

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯವಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [ 2 ಪೈಸೆ

# ಆಂಧ್ರ ಮಂತ್ರಿಗಳ ಘೇರಾವು – ರಾಜೀನಾಮೆ ಕೊಡಲು ಒತ್ತಾಯ

ಮೈಸೂರು ನಜರಬಾದು ರಾಣಾ ಪ್ಯಾಲೇಸ್ ಆವರಣದಲ್ಲಿ ಹಾಕಿರುವ
— ನಮ್ಮ ಸ್ವಂತ ಥಿಯೇಟರ್‌ನಲ್ಲಿ —
11-3-69 ರಿಂದ ಪ್ರಾರಂಭ – ಪ್ರತಿದಿನ ಸಂಜೆ 6-30 ರಿಂದ 12-30 ರವರೆಗೆ
ವಿವಿಧ ವಿನೋದಾವಳಿಗಳು
ಮಲಬಾರಿನ ಸುರಿತ ಸರ್ಕಸ್‌ನವರಿಂದ ಸರ್ಕಸ್
ಎಲ್. ವಿ. ಬಾಬುರವರ ಮ್ಯಾಜಿಕ್ — ಆಂಧ್ರದ ನರ್ತಕಿಯರಿಂದ ನರ್ತನ

### "ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನಿರೀಕ್ಷಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿಸಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

### ಮರಿ ಭುಟ್ಟೋ ಪ್ರಲಾಪ

ನವದೆಹಲಿ— ಭುಟ್ಟೋ ನೇತೃತ್ವದ ಪಾಕಿಸ್ಥಾನದ ಪ್ರಜಾ ಪಕ್ಷದ ಸದಸ್ಯ ನಿವೃತ್ತ ಮೇಜರ್ ಜನರಲ್ ಅಕ್ಬರ್ ಖಾನ್ ದೇಶವು ಈಗಿನಂತಹ ಪರಿಸ್ಥಿತಿಯಿಂದ ಪಾರಾದನಂತರ, ಕಾಶ್ಮೀರ ವಿಮೋಚನೆಗೆ ನಾವು ಹೋಡೆದಾಡುವವು ಮತ್ತು ಆಗ್ರಾ ಡೆಲ್ಲಿಯನ್ನೂ ಆಕ್ರಮಿಸುವವು" ಎಂದು ಹೇಳಿರುವದಾಗಿ ಪಾಕಿಸ್ತಾನ ಪತ್ರಿಕೆಗಳು ಪ್ರಕಟಿಸಿವೆ.

ಇದ್ದೀಗ
ಮೈಸೂರು ಸರ್ಕಾರದ ರೇಷ್ಮೆನೇಯ್ಗೆ ಕಾರ್ಖಾನೆಯಿಂದ
ಕಣ್ಣು ತಣಿಸುವ ಅಪ್ರತಿಮ ಬಣ್ಣಗಳು
ಮನಮೋಹಕ ನಮೂನೆಯ
ವಿಶಿಷ್ಟ ನಯುಗಾರಿಕೆಯ
ಸೀರೆ ಮತ್ತು ವಸ್ತ್ರಗಳು ಹೊರಬಂದಿವೆ
ಮೈಸೂರು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ,
ಮಾನಂದವಾಡಿ ರಸ್ತೆ, ಮೈಸೂರು-4

### ಮುಖ್ಯಮಂತ್ರಿಗಳಲ್ಲಿ ನಿಯೋಗ

ಬೆಂಗಳೂರು— ಪಿರಿಯಾಪಟ್ಟಣ ಮತ್ತು ಕೆ ಆರ್ ನಗರದ ನಿಯೋಗವು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರನ್ನು ಕಂಡು, ಕಾವೇರಿ ನೀರು ಹರಿಯುವ ಹರಂಗಿ, ಕಂಬಡಕಡ ಮತ್ತಿತರ ಪ್ರಾಜೆಕ್ಟುಗಳನ್ನು ಕೂಡಲೇ ಕೈಗೊಳ್ಳಬೇಕೆಂದು ಮತ್ತು ಭೂಕಂದಾಯ ಹಳೇ ದರದಂತೆ ವಸೂಲಾಯ್ಯಡಬೇಕೆಂದೂ ಕೋರಿದರು – ಮುಖ್ಯಮಂತ್ರಿಗಳು ಸಹಾನುಭೂತಿಯಿಂದ ಕೇಳಿದರು.

★

### ಭೂಕಂದಾಯ

ಬೆಂಗಳೂರು— ಭೂಕಂದಾಯ ವಿಚಾರದಲ್ಲಿನ ಸರಕಾರದ ನೀತಿ ಬಗ್ಗೆ ಶುಕ್ರವಾರ ಕಂದಾಯ ಮಂತ್ರಿ ಶ್ರೀ ಕೌಜಲ್ಗಿ ಯವರು ವಿವರವಾದ ಹೇಳಿಕೆಯನ್ನು ಕೊಡುವರೆಂದು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರವರು ಶಾಸನಸಭೆಯಲ್ಲಿ ತಿಳಿಸಿದರು.

### ಮಂತ್ರಿಗಳಿಗೆ ಘೇರಾವೂ

ಹೈದ್ಧರಾಬಾದು— ಶಾಸನಸಭೆಗೆ ಹೊರಡಲಿದ ತೆಲಂಗಾಣಾ ಭಾಗದ ನಾಲ್ಕು ಆಂಧ್ರ ಪ್ರದೇಶ ಮಂತ್ರಿಗಳನ್ನು ನಿನ್ನೆ ವಿದ್ಯಾರ್ಥಿಗಳು ಘೇರಾವೂ ಮಾಡಿ, ಪ್ರತ್ಯೇಕ ತೆಲಂಗಾಣಕ್ಕೆ ಕೇಳಿಕೆಹಾಕಿ, ಅವರು ರಾಜೀನಾಮೆ ಕೊಡಬೇಕೆಂದು ತಿಳಿಸಿದರು — ತೆಲಂಗಾಣದ ಎಲ್ಲಾ 9 ಮಂತ್ರಿಗಳನ್ನು ಘೇರಾವೂ ಮಾಡಿ, ಅವರ ಮನೆ ಪಿಕೆಟ್ ಮಾಡಿ, ಅವರು ರಾಜೀನಾಮೆ ಕೊಟ್ಟು ಪ್ರತ್ಯೇಕ ತೆಲಂಗಾಣಾ ರಾಜ್ಯಕ್ಕೆ ಶ್ರಮಿಸುವಂತೆ ಮಾಡಲು ಯೋಜಿಸಲಾಗಿದೆ.

★

### ಗಲಭೆಯಲ್ಲಿ ನೊಂದವರಿಗೆ

ಬೆಂಗಳೂರು— ಹುಬ್ಬಳ್ಳಿಯಲ್ಲಿ ಈಚೆಗೆ ನಡೆದ ಗಲಭೆಯಲ್ಲಿ ನಷ್ಟಗೊಂಡವರಿಗೆ ಸರಕಾರ ರೂ. 40000 ಕೊಟ್ಟಿರುವದಾಗಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರವರು ಶಾಸನಸಭೆಯಲ್ಲಿ ತಿಳಿಸಿದರು.

★

### ಎಚ್ಚರಿಕೆ

ಬೆಂಗಳೂರು— ತಿರುಚನಾಪಳ್ಳಿಯ ಕೆಲವು ಮುಂದಿ ಕೆಲವರು ಪೋಸ್ಟಾಫೀಸು ಮತ್ತು ಬ್ಯಾಂಕುಗಳ ಹಣ ಕಟ್ಟುವ ಸ್ಥಳದಿಂದ ಗಿರಾಕಿಗಳ ಹಣ ಅಪಹರಿಸುತ್ತಿರುವರೆಂಬ ವಿಷಯದಲ್ಲಿ ಪೋಲೀಸರು ಸಾರ್ವಜನಿಕರನ್ನು ಎಚ್ಚರಿಸಿರುವರು.

●

### ದೇವಾಲಯಕ್ಕೆ ನೆರವು

ನವದೆಹಲಿ— ಕೌಲಾಲಂಪುರದಲ್ಲಿ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಾಲಯದಲ್ಲಿ ಸಾಕಲು ಒಂದು ಜೊತೆ ನವಿಲನ್ನು ನುಲೇಷಿಯಾಕ್ಕೆ ರಫ್ತುಮಾಡಲು ಸರಕಾರ ಅನುಮತಿ ಕೊಟ್ಟಿತೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

## ಪ್ರಜಾಪ್ರಭುತ್ವ

ಇಂಗ್ಲೀಷು ಜನರು ಪ್ರಜಾಪ್ರಭುತ್ವದಲ್ಲಿ ತಾವು ಸ್ವತಂತ್ರರೆಂದು ತಿಳಿದಿರುವರು ಆದರೆ ಈ ಅಭಿಪ್ರಾಯ ತೀರ ತಪ್ಪು. ಪಾರ್ಲಿಮೆಂಟು ಸದಸ್ಯರನ್ನು ನೇಮಿಸುವಾಗ ಮಾತ್ರ ಅವರು ಸ್ವತಂತ್ರವು. ಚುನಾವಣೆ ನಡೆದ ನಂತರ, ಅವರು ತಮ್ಮ ಗುಲಾ ವಿಗಿರಿ ಸ್ಥಿತಿಗೆ ಮತ್ತೆ ಬರುವರು. ನಂತರ ಅವರು ಏನೂ ಇಲ್ಲ. — ಜೀ. ಜಾಕ್ಸ್.
(ಸ್ಪೆಕ್ಟೇಟರ್) ರೂಪಾ

## ಸಂಬಳ ಹೆಚ್ಚಿಸಬಾರದು

ಬೆಂಗಳೂರು— ತುಕೋಳ್ ಕಮಿಷ್ಟ ಶಿಫಾರಸಿನಂತೆ ಸರಕಾರಿ ನೌಕರರಿಗೆ ಸಂಬಳ ಹೆಚ್ಚಿಸುವದನ್ನು ವಿಧಾನ ಪರಿಷತ್ತಿನಲ್ಲಿ ಕೆಲ ಸದಸ್ಯರು ವಿರೋಧಿಸಿದರು.

## ಸೈಕಲ್ ರೇಸ್

ನವದೆಹಲಿ— 18 ವರ್ಷಕ್ಕೂ ಕಡಮೆಯ ರಾಜಸ್ಥಾನದ ರಾಂ ಕುಮಾರ್ ಜೋಷಿಯು 160 ಕಿಲೋಮೀಟರಿನ 24 ನೇ ರಾಷ್ಟ್ರೀಯ ಸೈಕಲ್ ಪಂಥದಲ್ಲಿ ಪ್ರಥಮ ಸ್ಥಾನ ಪಡೆದನು.

## ಹೆಬ್ಬಕ್ಕಾಗಿ

ಮೈಸೂರು— ಹಬ್ಬದ ಪ್ರಯುಕ್ತ ಕಾರ್ಡುದಾರರಿಗೆ ವಿಶೇಷ ಕೋಟಾ 1 ಕೆಜಿ ಮೈದಾ 1 ಕೆಜಿ ರವೆ ಅರ್ಧ ಕೆಜಿ ಸಕ್ಕರೆ ಕೊಡಲಾಗುವುದು.

## ಲಾಟರಿ

ಬೆಂಗಳೂರು— ಸರಿಯಾದ ಮುತ್ತು ಸೂಕ್ತ ಕಾಲದಲ್ಲಿ ಲಾಟರಿಗಳನ್ನು ನಡೆಸಲು ಸರಕಾರ ಯೋಜಿಸಿರುವದಾಗಿ ಶಾಸನ ಸಭೆಯಲ್ಲಿ ಅರ್ಥ ಮಂತ್ರಿ ಶ್ರೀ ರಾಮಕೃಷ್ಣ ಹೆಗ್ಡೆ ಹೇಳಿದರು.



**Protect the Cow**

## Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H. H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah. Sri Madhav Shenoi. Sri Opera Talkies, Padmabhushana Dr. M.C. Modi. Dr. R. S. Nanjunda swamy (Glasgow) Sri Ananthanarasimha Iyengar (Honganur) have generously extended donations and best wishes

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.


ಪುತ್ತಳಿ ಜಯಪ್ರದ 2ನೇ ವಾರ
ಅಮೋಘ ಆರಂಭ

— ಚಿತ್ತಾಕರ್ಷ ಸಾಂಸಾರಿಕ ಹಿಂದಿ ಚಿತ್ರ —

ಘರ್ ಕ ಚಿರಾಗ್

ಪಾತ್ರ— ಧರ್ಮೇಂದ್ರ, ಬಿಶ್ವಜಿತ್, ವಹಿದಾ ರಹಿಮಾನ್,
ಬಾಲರಾಜ್ ಸಹಾನಿ, ದೇವ್ ಕುಮಾರ್

ನಿರ್ದೇಶನ : ಜಗದೇವ್ — ಸಂಗೀತ : ಮದನ್ ಮೋಹನ್

[ ದಿನ 3 ಪ್ರದರ್ಶನಗಳು ]

ಆಪೆರಾ— ಜನಪ್ರಿಯ 2ನೇ ವಾರ

— ಅತ್ಯಮೋಘ ಹಿಂದಿ ಚಿತ್ರ —

ಪರಿವಾರ್

ಮನರಂಜನ ತೆರಿಗೆ ಮನ್ನಾ ಮಾಡಿದೆ ಪರ್ಣರಂಜಿತ

ಪಾತ್ರ : ಜಿತೇಂದ್ರ ನಂದ, ರಾಜೇಂದ್ರನಾಥ್, ಓಂ ಪ್ರಕಾಶ್

.... ದಿನವಹಿ 3 ಆಟಗಳು ....

Quality Printing — Neat Binding

**Lakshminarasimha Press**

Sivarampet, Mysore

SHAKTI
SUDHA

**A Superb Tonic**

**Help The Gorakshana**

ಅಶೋಕ ಏಜೆನ್ಸೀಸ್

ಅನ್ನಪೂರ್ಣ ಬಿಲ್ಡಿಂಗ್ಸ್, ವೈಯೂಂ
ಎಲ್ಲ ವಿಧ ಬಯಕೆಗಳನ್ನು ಪೂರೈಸುವ ಮಳಿಗೆ


Edited, Printed & Published by Dharmaprachara Niirate M S Krishna Rao (Proprietor) at the Satyavad Press Chamarrajapuram, Mysoe 4